# ಕರ್ನಾಟಕ ಸರ್ಕಾರದ ನಡೆವಳಿಗಳು

ವಿಷಯ: ಆಶ್ರಯ ನಗರ ನಿವೇಶನಗಳ ಯೋಜನೆಯನ್ನು ಮಾರ್ಪಡಿಸಿ "ವಾಜಪೇಯಿ ನಗರ ನಿವೇಶನಗಳ ಯೋಜನೆ" ಎಂಬ ನೂತನ ನಾಮಾಂಕಿತದಡಿ ಜಾರಿಗೊಳಿಸುವ ಬಗ್ಗೆ.

***

ಓದಲಾಗಿದೆ: ಸರ್ಕಾರದ ಪತ್ರ ಸಂ. ವಇ 57 ಹೆಚ್ಎಎಸ್ 2007 ದಿನಾಂಕ 4.08.2007.

ಪ್ರಸ್ತಾವನೆ:

ರಾಜ್ಯ ಸರ್ಕಾರವು ರಾಜ್ಯದ ನಗರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿನ ಜನರಿಗೆ ವಸತಿ ಸೌಲಭ್ಯ ಕಲ್ಪಿಸುವುದಕ್ಕಾಗಿ ನಿವೇಶನಗಳನ್ನು ಹಂಚಲು ಆಶ್ರಯ ನಗರ ನಿವೇಶನಗಳ ಯೋಜನೆಯನ್ನು ಹಮ್ಮಿಕೊಂಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಭೂಮಿಯು ಲಭ್ಯವಾಗುತ್ತಿಲ್ಲವಾದ್ದರಿಂದ ಮತ್ತು ಜಮೀನಿನ ಖರೀದಿ ದರದಲ್ಲಿ ವಿಪರೀತ ಹೆಚ್ಚಳದಿಂದಾಗಿ ಭಾರಿ ಬೆಲೆಯಲ್ಲಿ ಖಾಸಗಿ ಜಮೀನು ಖರೀದಿಸಲು ಸಾಧ್ಯವಾಗದೇ ಸರ್ಕಾರವು ನಿವೇಶನಗಳ ಹಂಚಿಕೆಗಾಗಿ ನಿಗದಿಪಡಿಸಿದ ಗುರಿಯನ್ನು ಸಾಧಿಸಲಾಗುತ್ತಿಲ್ಲ. ಆದುದರಿಂದ, ಜಿಲ್ಲಾಧಿಕಾರಿಗಳು ಜಮೀನಿನ ಕನಿಷ್ಠ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ಗರಿಷ್ಠ ಮೂರು ಪಟ್ಟು ಹೆಚ್ಚಿನ ಮಿತಿಯವರೆಗೆ ಜಮೀನು ಖರೀದಿಸಲು ಅನುಮತಿಸಿ, ಅವಶ್ಯವಿರುವ ಹೆಚ್ಚಿನ ಮೊತ್ತ ಬಿಡುಗಡೆ ಮಾಡುತ್ತ ಫಲಾನುಭವಿಗಳ ವಂತಿಗೆಯೊಂದಿಗೆ ಈಗ ಜಾರಿಯಲ್ಲಿರುವ ಆಶ್ರಯ ನಗರ ನಿವೇಶನಗಳ ಯೋಜನೆಯನ್ನು ಮಾರ್ಪಡಿಸಿ "ವಾಜಪೇಯಿ ನಗರ ನಿವೇಶನಗಳ ಯೋಜನೆ" ಎಂಬ ನೂತನ ನಾಮಾಂಕಿತದೊಂದಿಗೆ ಜಾರಿಗೆ ತರಲು ಪ್ರಸ್ತಾಪಿಸಲಾಗಿದೆ. ಅದರಂತೆ 2010–11ನೇ ಸಾಲಿನಿಂದ ಮೊದಲನೆಯ ಹಂತದಲ್ಲಿ 50,000 ಫಲಾನುಭವಿಗಳಿಗೆ ನಿವೇಶನ ಹಂಚಲು ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

## ಆದೇಶ ಸಂ. ವಇ 26 ಹೆಚ್ಎಎಮ್ 2010, ಬೆಂಗಳೂರು, ದಿನಾಂಕ 13ನೇ ಏಪ್ರಿಲ್ 2010

1. ಆಶ್ರಯ ನಗರ ನಿವೇಶನಗಳ ಯೋಜನೆಯನ್ನು ಸೂಕ್ತವಾಗಿ ಮಾರ್ಪಡಿಸಿ "ವಾಜಪೇಯಿ ನಗರ ನಿವೇಶನಗಳ ಯೋಜನೆ" ಎಂಬ ನೂತನ ನಾಮಾಂಕಿತದಡಿ ಜಾರಿಗೊಳಿಸುವುದಕ್ಕಾಗಿ 2010–11ನೇ ಸಾಲಿನಿಂದ ಮೊದಲನೆಯ ಹಂತದಲ್ಲಿ 50,000 ಫಲಾನುಭವಿಗಳಿಗೆ ನಿವೇಶನ ಹಂಚಲು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ದುರ್ಬಲ ವರ್ಗದವರಿಗಾಗಿ ನಗರ ನಿವೇಶನಕ್ಕಾಗಿ ನೀಡಿರುವ ಅನುದಾನದಿಂದ ಒಂದು ಎಕರೆ ಜಮೀನಿನಲ್ಲಿ 20' x 30' ವಿಸ್ತೀರ್ಣದ 40 ನಿವೇಶನಗಳ ರಚನೆಗಾಗಿ 1,250 ಎಕರೆ ಜಮೀನು ಖರೀದಿಸಲು, ಖರೀದಿ ಪ್ರಕ್ರಿಯೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

2. ಜಮೀನು ಖರೀದಿಗಾಗಿ ಅವಶ್ಯವಿರುವ ಮೊತ್ತವನ್ನು ಶೇಕಡ 66.66ರಷ್ಟು ರಾಜ್ಯ ಸರ್ಕಾರದ ಸಹಾಯಧನದಿಂದ ಹಾಗೂ ಉಳಿದ ಶೇಕಡ 33.34ರಷ್ಟನ್ನು ಫಲಾನುಭವಿಗಳ ವಂತಿಗೆಯಿಂದ ಭರಿಸತಕ್ಕದ್ದು:

3. ಹೊಸದಾಗಿ ನಿರ್ಮಾಣಗೊಳ್ಳುವ ವಸತಿ ಬಡಾವಣೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

4. ಈ ಕಾರ್ಯಕ್ರಮದಡಿಯಲ್ಲಿ ಮಾರ್ಗಸೂಚಿ ದರದ ಗರಿಷ್ಠ ಮೂರು ಪಟ್ಟು ದರದವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನಂತೆ ಅಧಿಕಾರಯುತ ಸಮಿತಿಯನ್ನು ರಚಿಸಲಾಗಿದೆ:

| | |
|---|---|
| ಜಿಲ್ಲಾಧಿಕಾರಿಗಳು .. .. .. | ಅಧ್ಯಕ್ಷರು |
| ~~ಸ್ಥಳೀಯ ಶಾಸಕರು~~ .. .. .. | ಸದಸ್ಯರು |
| ಉಪ ವಿಭಾಗಾಧಿಕಾರಿಗಳು .. .. | ಸದಸ್ಯರು |
| ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು .. .. | ಸದಸ್ಯರು |
| ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಮುಖ್ಯ ಅಧಿಕಾರಿಗಳು .. | ಸದಸ್ಯ ಕಾರ್ಯದರ್ಶಿ |

5. ಒಂದು ವೇಳೆ ಮಾರ್ಗಸೂಚಿ ದರದ ಮೂರು ಪಟ್ಟು ದರಕ್ಕಿಂತಲೂ ಹೆಚ್ಚಿನ ದರ ಪಾವತಿಸಬೇಕಾದಲ್ಲಿ ಸರ್ಕಾರದ ಮಟ್ಟದಲ್ಲಿ ಪ್ರಕರಣವಾರು ಅನುಮೋದನೆ ಪಡೆಯತಕ್ಕದ್ದು.

6. ಮೇಲ್ಕಾಣಿಸಿದಂತೆಯೂ ಜಮೀನು ಖರೀದಿ ಸಾಧ್ಯವಾಗದಿದ್ದ ಪಕ್ಷದಲ್ಲಿ, ಮನೆ ನಿವೇಶನಗಳ ಹಂಚಿಕೆಗಾಗಿ ಜಿಲ್ಲಾಧಿಕಾರಿಗಳಿಗೆ The Karnataka Acquisition of Lands for Grant of House Sites Act, 1972 (Karnataka Act 18 of 1973) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಭೂಸ್ವಾಧಿನಪಡಿಸಿಕೊಳ್ಳಲು ಅಧಿಕಾರವನ್ನು ಪ್ರತ್ಯಾಯೋಜಿಸಿರುವ ಮೇರೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಭೂಮಾಲಿಕರೊಂದಿಗೆ ಚರ್ಚಿಸಿ ಸಮ್ಮತಿ ಐತೀರ್ಪಿನ (consent award) ಮೂಲಕ ಭೂ ಖರೀದಿ ಮಾಡುವುದು ಇಲ್ಲವೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸುವುದು.

7. ಮೇಲೆ ಹೇಳಿದಂತೆ ಜಮೀನು ಖರೀದಿಯಲ್ಲಿ ಸರ್ಕಾರದ ಅನುದಾನ ಪೋಲಾಗದೇ ಸದ್ಬಳಕೆಯಾಗುವಂತೆ ಮತ್ತು ಸ್ಥಳೀಯ ಸ್ಥಿತಿಗತಿಗೆ ಅನುಗುಣವಾಗಿ ಪ್ರತಿ ಪ್ರಕರಣದಲ್ಲಿನ ದರವನ್ನು ನ್ಯಾಯಸಮ್ಮತವಾಗಿ ಪರಿಗಣಿಸಿ ನಿರ್ಧರಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

8. ಈ ಕುರಿತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಕ್ರಿಯಾ ಯೊಜನೆಯನ್ನು ತಯಾರಿಸಿ ಅದರ ಅನುಷ್ಠಾನಕ್ಕಾಗಿ ಹೊರಡಿಸುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Kvallur 13/04

(ಕೆ. ಆರ್. ವಲ್ಲೂರ)
ಪೀಠಾಧಿಕಾರಿ–2, ವಸತಿ ಇಲಾಖೆ.

1. ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು,
2. ಸರ್ಕಾರದ ಎಲ್ಲಾ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಮುಖ್ಯ ಮಂತ್ರಿಯವರ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು,
5. ಎಲ್ಲಾ ಪ್ರಾಂತೀಯ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
6. ಆಯುಕ್ತರು, ಪೌರಾಡಳಿತ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
9. ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಆಪ್ತ ಕಾರ್ಯದರ್ಶಿ
10. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ 3 ಮತ್ತು 9), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
11. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
12. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.